ಕರ್ನಾಟಕ ಸರಕಾರ

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಕರ್ನಾಟಕ ರಾಜ್ಯ ವಕ್ಫ್ ಮಂಡಳಿ

ಸಂಖ್ಯೆ:-ಕೆ.ಎಸ್.ಬಿ.ಎ/ಎ.ಡಿ.ಎಮ್/ಇ.ಎಸ್.ಟಿ/32 & 33/2017-18

ಕರ್ನಾಟಕ ರಾಜ್ಯ ವಕ್ಫ್ ಮಂಡಳಿ,
ನಂ.6, ಕನ್ನಿಂಗ್ ಹ್ಯಾಮ್ ರಸ್ತೆ,
ಬೆಂಗಳೂರು -560052
ದಿನಾಂಕ:19-02-2018

## ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿಲಕೋಟೆ)

ವಿಷಯ: ಮುಸ್ಲಿಂ ಸಮುದಾಯದ ಮೃತರ ದೇಹಗಳನ್ನು ಸುರಕ್ಷಿತವಾಗಿಡಲು 66 ಫ್ರೀಜರ್ ಖರೀದಿಸುವ ಹಾಗೂ ರಾಜ್ಯದ ಎಲ್ಲಾ ವಕ್ಫ್ ಸರ್ವೆ ಹಾಗೂ ಆಡಿಟ್ ಅಧಿಕಾರಿಗಳಿಗೆ 66 ಟ್ಯಾಬ್ಲೇಟ್ ಫೋನ್ ವಿತ್ ಕೀ-ಬೋರ್ಡ (External) ಖರೀದಿಸುವ ಟೆಂಡರ್ ದರಪಟ್ಟಿಯನ್ನು ಆಹ್ವಾನಿಸುವ ಕುರಿತು.

ಮುಸ್ಲಿಂ ಸಮುದಾಯದ ಮೃತರ ದೇಹಗಳನ್ನು ಸುರಕ್ಷಿತವಾಗಿಡಲು 66 ಫ್ರೀಜರ್ ಖರೀದಿಸುವ ಹಾಗೂ ರಾಜ್ಯದ ಎಲ್ಲಾ ವಕ್ಫ್ ಸರ್ವೆ ಹಾಗೂ ಆಡಿಟ್ ಅಧಿಕಾರಿಗಳಿಗೆ 66 ಟ್ಯಾಬ್ಲೇಟ್ ಫೋನ್ ವಿತ್ ಕೀ-ಬೋರ್ಡ (External) ಖರೀದಿಸುವ ಟೆಂಡರ್ ದರಪಟ್ಟಿಯನ್ನು ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಆಹ್ವಾನಿಸಿದ್ದು ಅಧಿಕೃತ ಉತ್ಪಾದಕರು/ಮಾರಾಟಗಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

**ಟೆಂಡರ್ ಪ್ರಕಟಣೆ :**

**(ದ್ವಿ ಲಕೋಟೆ ಪದ್ಧತಿ)**

Calendar of Events

| | | |
|---|---|---|
| 1 | ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ | ಕೆ.ಎಸ್.ಬಿ.ಎ/ಎ.ಡಿ.ಎಮ್/ಇ.ಎಸ್.ಟಿ/32&33/2017-18<br>ದಿನಾಂಕ:19-02-2018 |
| 2 | ಟೆಂಡರ್‌ಗಿಟ್ಟ ಮೊತ್ತ: | ಫ್ರೀಜರ್ - ರೂ. 42,90,000/-<br>ಟ್ಯಾಬ್ಲೇಟ್ ಫೋನ್ ವಿತ್ ಕೀ-ಬೋರ್ಡ (External) ರೂ. 13,86,000/- |
| 3 | ಇ. ಎಂ.ಡಿ ನಿಗದಿಪಡಿಸಿರುವ ಮೊತ್ತ<br>(ಇ.ಎಂ.ಡಿ ಮೊತ್ತವನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕರ್ನಾಟಕ ರಾಜ್ಯ ವಕ್ಫ ಮಂಡಳಿ ಬೆಂಗಳೂರು ರವರ ಹೆಸರಿನಲ್ಲಿ ಅರ್ಜಿಯೊಂದಿಗೆ ಬ್ಯಾಂಕ್ ಡಿ.ಡಿ. ರೂಪದಲ್ಲಿ ಲಗತ್ತಿಸತಕ್ಕದ್ದು. ) | ಫ್ರೀಜರ್ - ರೂ. 2,14,500/-<br>ಟ್ಯಾಬ್ಲೇಟ್ ಫೋನ್ ವಿತ್ ಕೀ-ಬೋರ್ಡ (External) ರೂ. 69,300/- |

... 2

| | | |
|---|---|---|
| | ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ & ಸಮಯ. | ದಿನಾಂಕ-06-03-2018<br>ಸಂಜೆ 5.00 ಗಂಟೆಯೊಳಗೆ. |
| 5 | ಟೆಂಡರ್ ದಾಖಲಾತಿಗಳನ್ನು & ತಾಂತ್ರಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ ಮತ್ತು ವೇಳೆ | ದಿನಾಂಕ-07-03-2018 ಅಪರಾಹ್ನ 3.00 ಗಂಟೆ |
| 6 | ಟೆಂಡರ್ ಆರ್ಥಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ ಮತ್ತು ವೇಳೆ | ದಿನಾಂಕ: 09.02.2018 ಅಪರಾಹ್ನ 3.00 ಗಂಟೆ |
| 7 | ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ,<br>ದೂರವಾಣಿ ಸಂಖ್ಯೆ | ಎಂ.ಎಸ್. ಹಮೀದುದ್ದೀನ್ & ಚೇತನ್ ಎನ್.<br># 6, "ದಾರುಲ್ ಔಕಾಫ್", ಕನ್ನಿಂಗ್‌ಹ್ಯಾಮ್ ರೋಡ್, ಬೆಂಗಳೂರು. 560052.<br>ಫೋ:080-22264594, 080-22264595<br>ಫೋ:- 8970846666, 9740574986.<br>ಮೇಲ್ :- info@karwakf.org |

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಕರ್ನಾಟಕ ರಾಜ್ಯ ವಕ್ಫ್ ಮಂಡಳಿ
ಬೆಂಗಳೂರು.

## ಭಾಗ–1

### ಟೆಂಡರ್ ಷರತ್ತುಗಳು ಹಾಗೂ ಸಲ್ಲಿಸಬೇಕಾದ ದಾಖಲೆಗಳು:

1. ಟೆಂಡರ್ ಸಲ್ಲಿಸುವ ಸಂಸ್ಥೆ/ಉತ್ಪಾದಕ ಘಟಕ ಸರ್ಕಾರದ ಸಕ್ಷಮ ಪ್ರಾಧಿಕಾರದಿಂದ(ನಗರ ಸಭೆ/ನಗರ ಪಾಲಿಕೆ/ಗ್ರಾಮ ಪಂಚಾಯತ್/ಸಹಕಾರ ಸಂಘಗಳ ನೋಂದಣಿ) ನೋಂದಣಿಯಾಗಿರಬೇಕು. 2017-18ನೇ ಸಾಲಿನ ನವೀಕೃತ ಲೈಸೆನ್ಸ್ ಪ್ರತಿ ಸಲ್ಲಿಸಬೇಕು.
2. ಟೆಂಡರ್ ಸಲ್ಲಿಸುವವರು ಅನುಬಂಧದಲ್ಲಿ ನಮೂದಿಸಿರುವ ಸಾಮಾಗ್ರಿಗಳ ಮಾರಾಟಕ್ಕೆ ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪರವಾನಿಗೆಯ ದೃಢೀಕೃತ ಪ್ರತಿಯನ್ನು ಲಗತ್ತಿಸಬೇಕು.
3. ಜಿ.ಎಸ್.ಟಿ ನೋಂದಣಿ ಪ್ರತಿ.
4. ಪಾನ್‌ಕಾರ್ಡ್ ಪ್ರತಿ
5. 2015-16 ಮತ್ತು 2016-17ನೇ ಸಾಲಿನ ದೃಢೀಕೃತ ಅಡಿಟ್ ವರದಿಗಳು
6. ಟೆಂಡರ್‌ಗಳನ್ನು ಸಲ್ಲಿಸಬಯಸುವವರು 2015-16, 2016-17ನೇ ಸಾಲಿನಲ್ಲಿ ಆದಾಯ ತೆರಿಗೆ ಮತ್ತು ವ್ಯಾಟ್ ರಿಟರ್ನ್‌ಗಳನ್ನು ಸಲ್ಲಿಸಿರುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು ಲಗತ್ತಿಸಬೇಕು.
7. 2015-16 ಮತ್ತು 2016-17ನೇ ಸಾಲಿನಲ್ಲಿ ಸರ್ಕಾರಿ/ಅರೆ ಸರ್ಕಾರಿ ಸಂಸ್ಥೆಗಳಿಗೆ ಕಂಪ್ಯೂಟರ್/ಲ್ಯಾಪ್‌ಟಾಪ್, ಸ್ಮಾರ್ಟಫೋನುಗಳು ಮತ್ತು ಮೃತದೇಹಗಳನ್ನು ಸಂರಕ್ಷಿಸಿಡಲು ಉಪಯೋಗಿಸುವ ಫ್ರೀಜರ್‌ಗಳನ್ನು ಸರಬರಾಜು ಮಾಡಿದ ಬಗ್ಗೆ ಕಾರ್ಯಾದೇಶ ಹಾಗೂ ಅನುಭವ ದೃಢೀಕರಣ ಸಲ್ಲಿಸುವುದು.
8. ಟೆಂಡರ್‌ದಾರರು ಕಪ್ಪು ಪಟ್ಟಿಯಲ್ಲಿ ಸೇರಿರದೇ ಇರುವ ಬಗ್ಗೆ ಹಾಗೂ ಚುನಾಯಿತ ಸದಸ್ಯರಲ್ಲದೆ ಇರುವ ಬಗ್ಗೆ ರೂ.50ರ ಛಾಪಾ ಕಾಗದದಲ್ಲಿ ನೋಟರಿಯಿಂದ ಪಡೆದ ಅಫಿದವಿತ್ ಪ್ರತಿ ಸಲ್ಲಿಸಿಬೇಕು
9. ಅಪೂರ್ಣ ಮಾಹಿತಿ ಇರುವ ಅಥವಾ ತಪ್ಪು ಮಾಹಿತಿ ಇರುವ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.
10. ಸ್ಪೆಸಿಫಿಕೇಶನ್ ಪ್ರಕಾರ ಉತ್ತಮ ಗುಣಮಟ್ಟದ ಸಾಮಾಗ್ರಿಗಳನ್ನು ಪೂರೈಸಬೇಕು.
11. ಟೆಂಡರುದಾರರು ಜಿಎಸ್‌ಟಿ ಮತ್ತು ಸಾಗಾಣಿಕೆ ವೆಚ್ಚವನ್ನು ಸೇರಿಸಿಯೇ ದರಗಳನ್ನು ನಮೂದಿಸಬೇಕು.
12. ಅನುಬಂಧದಲ್ಲಿ ನಮೂದಿಸಿರುವ ಸಾಮಾಗ್ರಿಗಳ ಪೂರೈಕೆಗೆ ಸಲ್ಲಿಸಿರುವ ಟೆಂಡರ್‌ಗೆ ಸಂಬಂಧಿಸಿದಂತೆ ಮೊದಲು ಅನುಬಂಧ-1ನ್ನು (ತಾಂತ್ರಿಕ ಲಕೋಟೆ) ತೆರೆದು ಪರಿಶೀಲಿಸಲಾಗುವುದು. ಟೆಂಡರುದಾರರು ಅನುಬಂಧ-1ರಲ್ಲಿ ಕೇಳಿರುವ ಮಾಹಿತಿ ಮತ್ತು ದಾಖಲಾತಿಗಳನ್ನು ಒದಗಿಸಿದ್ದಲ್ಲಿ ಮಾತ್ರ ಅರ್ಥಿಕ ಬಿಡ್‌ನ್ನು ತೆರೆಯಲಾಗುವುದು.
13. ಯಶಸ್ವಿ ಟೆಂಡರ್‌ದಾರರು ನಮೂದಿಸಿರುವ ಸಾಮಾಗ್ರಿಗಳ ನಿಗದಿತ ಮಾದರಿ(ಸ್ಯಾಂಪಲ್) ವನ್ನು ನೀಡಲು ಬದ್ಧರಿರಬೇಕು.
14. ಟೆಂಡರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ, ಬೆಂಗಳೂರು ಇವರಿಗೆ ಇರುತ್ತದೆ.
15. ಹೆಚ್ಚಿನ ಮಾಹಿತಿಗಾಗಿ ಎಂ.ಎಸ್. ಹಮೀದುದ್ದೀನ್ ಮತ್ತು ಚೇತನ್ ಎನ್. ರವರನ್ನು # 6, "ದಾರುಲ್ ಔಕಾಫ್", ಕನ್ನಿಂಗ್‌ಹ್ಯಾಮ್ ರೋಡ್, ಬೆಂಗಳೂರು. 560052. ಫೋ:080-22264594, 080-22264595, ಫೋ:- 8970846666, 9740574986. ಮೇಲ್ :- info@karwakf.org ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಕರ್ನಾಟಕ ರಾಜ್ಯ ವಕ್ಫ್ ಮಂಡಳಿ
ಬೆಂಗಳೂರು.